# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 204 / 2017

ಸಿಡಬ್ಲ್ಯೂ- 04
ಪಿಡಬ್ಲ್ಯೂ-02

ದಿನಾಂಕಃ **07.11.2024.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | |
|---|---|
| ಸಾಕ್ಷಿಯ ಹೆಸರುಃ | - ಸುದರ್ಶನ |
| ತಂದೆಯ/ಗಂಡನ ಹೆಸರುಃ | - ಚನ್ನಯ್ಯಸ್ವಾಮಿ |
| ವಯಸ್ಸುಃ | -? 45 ವರ್ಷ |
| ಉದ್ಯೋಗಃ | - ಖಾಸಗಿ ಉದ್ಯೋಗ. |
| ವಾಸಸ್ಥಳಃ | - ಕಲಬುರಗಿ. |

ಮುಖ್ಯ ವಿಚಾರಣೆಃ ಹಿ.ಸ.ಸ.ಅ. ರವರಿಂದಃ

2008 ರಲ್ಲಿ ನಾನು ಗುಲ್ಬರ್ಗದ ಪ್ರೌಡ ಶಾಲೆಯಲ್ಲಿ ಚಿತ್ರಕಲಾ ಸಹಶಿಕ್ಷಕನ್ನಾಗಿ ನೇಮಕಗೊಂಡಿದ್ದೆ. 2010 ರಲ್ಲಿ ಪ್ರಭಾರವಾಗಿ ಬ್ಲೂ ಸ್ಟಾರ್ ಮಹಾವಿದ್ಯಾಲಯದಲ್ಲಿ ನನ್ನನ್ನು ಕಳುಹಿಸಿ ಕೊಟ್ಟಿದ್ದರು. 2 ವರ್ಷಗಳ ನಂತರ ನನ್ನ ಕುಟುಂಬದಲ್ಲಿ ಸಮಸ್ಯೆಯ ಪ್ರಾರಂಭವಾಗಿದ್ದರಿಂದ ಬ್ಲೂ ಸ್ಟಾರ್ ಮಹಾವಿದ್ಯಾಲಯದಲ್ಲಿ ಉದ್ಯೋಗ ಮಾಡುವುದನ್ನು ನಾನು ಬಿಟ್ಟಿರುತ್ತೇನೆ. ನಂತರ ಈ ಪ್ರಕರಣದ ಬಗ್ಗೆ ಏನು ಆಗಿರುತ್ತದೆ ಎಂದುನನಗೆ ಗೊತ್ತಿರುವುದಿಲ್ಲ. 2 ನೇ ಆರೋಪಿಯು ಗುಲರ್ಗದ ಪ್ರೌಢ ಶಾಲೆಯಲ್ಲಿ ಮುಖ್ಯಪ್ಯಾಧ್ಯರು ಆಗಿದ್ದರು. 1 ನೇ ಆರೋಪಿ ನಮ್ಮ ಸಂಸ್ಥೆಯ ಅಧ್ಯಕ್ಷರು ಆಗಿದ್ದರು. ಈ ಪ್ರಕರಣದ ಬಗ್ಗೆ ನಾನು ಪೊಲೀಸರು ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಹಿರಿಯ ಸ.ಸ. ರವರಿಂದಃ

ಗಂಗಧಾರಭಕ್ತ ಪ್ರಭು ಶಾಲೆಯನ್ನು 1 ನೇ ಆರೋಪಿತನ್ನು ನಡೆಸುತ್ತಿದ್ದನ್ನು ಎಂದರೆ ಸರಿ. ಸದರಿ ಶಾಲೆಯಲ್ಲಿ ನಾನು ಚಿತ್ರಕಲಾ ಶಿಕ್ಷಕನಾಗಿದ್ದೇ ಎಂದರೆ ಸರಿ 2008 ರಲ್ಲಿ ಯಾದಗಿರಿ

ಶಾಲೆಯಲ್ಲಿ ನೇಮಕಗೊಂಡಿದ್ದೇನೆಂದರೆ ಸರಿ. ಆ ಸಮಯದಲ್ಲಿ 2009 ರಲ್ಲಿ ಅನುದಾನ ಪಡೆಯುತ್ತಿದ್ದ ಅಂತಾ ಹೇಳಿ 1 ನೇ ಆರೋಪಿತನ್ನು ನನಗೆ ಚಿತ್ರಕಲಾ ಸಹಶಿಕ್ಷಕನ್ನಾಗಿ ನೇಮಕ ಮಾಡಿಕೊಳ್ಳುತ್ತೇನೆ ಎಂದು ನನಗೆ ಹೇಳಿ 3 ಲಕ್ಷ ರೂಪಾಯಿಗಳನ್ನು ಕೊಡು ಎಂದು ನನಗೆ ಹೇಳಿದ್ದರು ಎಂದರೆ ಸರಿ. ನಂತರ ನಾನು ನನ್ನ ಮಾವನವರಾದ ಗಂಗಧಾರ ರವರನ್ನು ಕರೆದುಕೊಂಡು ಬಂದು 3 ಲಕ್ಷ ರೂಪಾಯಿಗಳನ್ನು 1 ನೇ ಆರೋಪಿತನಿಗೆ ಕೊಟ್ಟಿದ್ದೇ ಎಂದರೆ ಸರಿ. 2009 ರ ಸೆಪ್ಟಂಬರ ತಿಂಗಳಲ್ಲಿ ಅನುಧಾನ ಮಂಜೂರು ಆಗಿ ಎಲ್ಲಾ ಶಿಕ್ಷಕರು ಸಂಬಳ ಪಡೆಯುತ್ತಿದ್ದೇವು ಎಂದರೆ ಸರಿ. 2008 ರಕ್ಕಿಂತ ಮುಂಚೆ ನೇಮಕಗೊಂಡವರಿಗೆ ಸರಕಾರ ಅನುಧಾನಕ್ಕೆ ಒಳಪಡಿಸಿದ್ದು ನಂತರದವರನ್ನು ಅನುಧಾನದಿಂದ ಕೈಬಿಟ್ಟಿದ್ದು ಆ ವೇಳೆಯಲ್ಲಿ ನನ್ನ ಹೆಸರು ಅನುಧಾನ ಪಟ್ಟಿಯಲ್ಲಿ ಬರಲಿಲ್ಲ ಎಂದರೆ ಸರಿ. ಆವಾಗ ನಾನು 1 ನೇ ಆರೋಪಿತನನ್ನು ಕೇಳಿದ್ದಾಗ ಅವರು ಆ ಶಾಲೆಯಲ್ಲಿ ಹೋಗಿ ಕೆಲಸ ಮಾಡು ಎಂದು ಹೇಳಿದ್ದರು. ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಭಕ್ತಪ್ರಭು ಪ್ರೌಡ ಶಾಲೆಯಲ್ಲಿ ಮತ್ತು ಚನ್ನವೀರ ಸ್ಮಾರಕ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡಿದ ಹಳೆಯ ವಿದ್ಯಾರ್ಥಿಗಳ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಮತ್ತು ವರ್ಗಾವಣೆ ಪ್ರಮಾಣ ಪತ್ರವನ್ನು ತಯಾರಿಸಿ ಹಂಪಿ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿ ಆ ದಾಖಲೆಗಳ ಆಧಾರದ ಮೇಲೆ ಇದ್ದ ಪ್ರತಿಯೊಂದು ವಿದ್ಯಾರ್ಥಿಗಳ ಹೆಸರಿನಲ್ಲಿ ಅನುದಾನವನ್ನು ಪಡೆದು ಅವರಿಗೆ ನೀಡದೇ ಸದರಿ ಅನುಧಾನವನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡಿರುವುದ್ದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ನಂತರ ನಾನು ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಚಾಸಾ-1 ರವರ ನೀಡಿ ನನಗೆ ಮತ್ತು ವಿದ್ಯಾರ್ಥಿಗಳಿಗೆ ನ್ಯಾಯ ದೋರಕಿಸಿಕೊಡಬೇಕೆಂದು ಕೇಳಿದೇ ಎಂದರೆ ಸರಿಯಲ್ಲ. ನಂತರ ದಿನಾಂಕಃ 04.02.2013 ಕ್ಕೆ ಚಾಸಾ-1 ರವರು ಮಾನ್ಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ನಾಗರೀಕರ ಹಕ್ಕು ಮತ್ತು ಜಾರಿನಿರ್ದೇಶನಾಲಯ ಬೆಂಗಳೂರು ರವರಿಗೆ ಅರ್ಜಿಯನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಇದೇ ರೀತಿ ನಾನು ಚಾಸಾ-23 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ನಕಲಿ ಜಾತಿ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳನ್ನು ಚಾಸಾ 23 ರವರ ಮುಂದೆ ಗುರುತು ಹಿಡಿದಿದ್ದೇ ಎಂದರೆ ಸರಿಯಲ್ಲ. ನಂತರ ನಾನು ಈ ರೀತಿಯಾಗಿ ಪೊಲೀಸರು ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 30 ರಿಂದ 42 ದಾಖಲೆಗಳನ್ನು ಚಾಸಾ-1 ರವರಿಗೆ ನಾನು ನೀಡಿದೇ ಎಂದರೆ ಸರಿಯಲ್ಲ. ದಿನಾಂಕಃ 30.11.2015 ರಂದು ನಾನು ಮೇಲೆ ನಮೂದಿಸಿದ ವಿಳಾಸದವನಿದ್ದು ------------------------------------------------------- ------------------------ ಗಣೀಕರಣ ಮಾಡಿದ ಹೇಳಿಕೆ ನಿಜವಿದೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಎಲ್ಲಾ ವಿಷಯಗಳು

ನನಗೆ ಗೊತ್ತಿದ್ದರು ಸಹ ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವ ಕಾರಣ ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಡಿ.ವಿ. ರವರಿಂದಃ

ನನ್ನ ನೇಮಕಾತಿ ಮತ್ತು ನನಗೆ ಬರಬೇಕಾದ ಅನುಧಾನಕ್ಕೂ 2 ನೇ ಆರೋಪಿತನಿಗೆ ಸಂಬಂದ ಹೊಂದಿರುವುದಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.